ಮೈಯಾಗ ಆರಾಮಿಲ್ಲ..." ಎಂಬೆಲ್ಲ ಸಬೂಬು ಹೇಳಿ ಅಡಿಗೆಯವರಿಂದಲೇ ಮಾಡಿಸುವದಿತ್ತು. ಮಾವನದ್ದು... ಶಾರದಾಳದ್ದು ಶ್ರದ್ಧೆಯಿಂದ ಮಾಡುತ್ತಾಳೆ. ಇದೊಂದು ವಿಷಯ ಬಿಟ್ಟರೆ ಅವರಿಬ್ಬರೂ ತಾಯಿ ಮಗಳಿಗಿಂತಲೂ ಹೆಚ್ಚು. ಪಕ್ಕದಲ್ಲಿ ಸಮೀರ ನಿಶ್ಚಿಂತೆಯಿಂದ ಮಲಗಿದ್ದಂತೆ ಭಾಗಕ್ಕನ ಮನಸು ಕೊಣ್ಣೂರಿಗೆ ಹೋಯಿತು.

ಭಾಗಿ ಕೊಣ್ಣೂರಿನ ಕುಲಕರ್ಣಿಯವರ ಮನೆಗೆ ಶ್ರೀಪತಿಯ ವಧುವಾಗಿ ಬಂದಾಗ ಹದಿಮೂರು ವರ್ಷದವಳಿರಬೇಕು. ಕೂಡು ಕುಟುಂಬ... ಎಂಟೆತ್ತಿನ ಕಮತ. ಅರಳುಗಣ್ಣಿನ ಸಂಪಿಗೆ ಮೂಗಿನ ಸುಂದರಿ ಘಟಪ್ರಭೆಯಂತೆ ಧುಮುಕಿದಳು. ಹತ್ತಿರದ ಗೋಕಾಕ ಫಾಲ್ಸ್‌ನ ತೂಗುಸೇತುವೆಯಂತೆ ತೂಗಿದಳು. ಅವರಲ್ಲೊಂದಾದಳು. ಆದರೆ, ನಾಲ್ಕು ವರ್ಷಗಳಾದರೂ ಭಾಗೀರಥಿಗೆ ಮಕ್ಕಳಾಗುವ ಯೋಗ ಬಂದಿರಲಿಲ್ಲ. ಆಗಲೇ ವಾಸುದೇವ ಮನೆಗೆ ಬಂದಿದ್ದ. ಅವನನ್ನು ಮನೆಗೆ ಕರೆತಂದ ಕಥೆಯೂ ಕರುಣಾಜನಕವಾಗಿತ್ತು. ಶ್ರೀಪತಿಗೆ ಸ್ನೇಹಿತನಂತೆ... ಹತ್ತಿರದ ಎಲೆಮನೋಳಿ ಹಳ್ಳಿಯಲ್ಲಿ ಮಳೆಗಾಲದಲ್ಲಿ ಮನೆ ಕುಸಿದು ಗಂಡ ಹೆಂಡತಿ ಇಬ್ಬರೂ ಅಪ್ಪಚ್ಚಿಯಾದರಂತೆ. ಹೊರಗೆ ಆಟವಾಡುತ್ತಿದ್ದ ಮಗು ಮಾತ್ರ ಉಳಿದುಕೊಂಡಿತು. ಯಾರೂ ದಿಕ್ಕಿಲ್ಲದಿದ್ದರಿಂದ ಶ್ರೀಪತಿ ಮನೆಗೆತ್ತಿಕೊಂಡು ಬಂದಿದ್ದ. ಒಂದು ವರ್ಷದ ಮಗು. ಹೆಸರು ಕೇಳಿದರೆ ತೊದಲುತ್ತ, “ವ... ವಾ..ಸಿ... ಸು...” ಎಂದಿತ್ತು. ಶ್ರೀಪತಿ, “ಅ... ವಾಸುದೇವ ಅಂತ. ಸ್ವಲ್ಪ ದಿವ್ಸ ನಮ್ಮನ್ಯಾಗ ಇರ್ಲಿ. ಆಮ್ಯಾಲೆ ಎಲ್ಲರೆ ಆಶ್ರಮದಾಗ ಬಿಟ್ಟ ಬರ್ತೇನಿ” ಎಂದಿದ್ದ. ಪ್ರಮೇಯವೇ ಬರಲಿಲ್ಲ. ಮನೆಯವರೆಲ್ಲ ಮಗುವನ್ನು ಮುದ್ದುಮಾಡಿದರು. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ... ಗರ್ಭ ಹೊತ್ತ ಸಿಹಿ ಸುದ್ದಿ ಕೊಟ್ಟಳು ಭಾಗೀರಥಿ. “ವಾಸೂನ ಕಾಲ್ಗುಣ ಭೊಲೊ ಅದ” ಎಂಬ ಮಾತು ಪ್ರಚಲಿತವಾಯಿತು. ಹಿರಿಯರು, “ಧೊಡ್ಡ ಕುಲಕರ್ಣಿ ಮನೆತನಕ್ಕ ಒಂದ ಕೂಸ ಹೆಚ್ಚಾಗತದೇನ... ಇಲ್ಲೇ ಇರ್ಲಿ ಬಿಡು” ಎಂದರು. ಹೀಗೆ ವಾಸುದೇವ ಮನೆಯಲ್ಲೊಂದಾಗಿ ಬೆಳೆದ. ಅವನ ಹಿಂದೆ ಕ್ರಮವಾಗಿ ಕೃಷ್ಣ, ಕಮಲಾ, ವಿಮಲಾ, ವಿಠಲ ಹುಟ್ಟಿ ಮನೆ ನಂದನವಾಯಿತು. ಕೃಷ್ಣನ ಜೊತೆಯಲ್ಲೇ ವಾಸುವಿಗೂ ಜಾವಳ, ಮುಂಜಿಯಾಯಿತು. ಎಲ್ಲರಿಗೂ ಅಣ್ಣನಾಗಿ ವಾಸಣ್ಣನಾದ.

ಶ್ರೀಪತಿರಾಯರ ಕುಲಕರ್ಣಿಕೆ ಜೋರಾಗಿತ್ತು. ನೂರೆಕರೆ ಹೊಲಗದ್ದೆಗಳೂ ಇದ್ದವು. ನಿಂಗಪ್ಪ ಉಳುಮೆ ಮಾಡಿ ನೋಡಿಕೊಳ್ಳುತ್ತಿದ್ದ. ಪ್ರಾಮಾಣಿಕ... ತೊಂದರೆಯೇ ಇರಲಿಲ್ಲ. ಆದರೆ, ಅವನ ಮಗ ಮಾದೇಶ ಪಿ.ಯು.ಸಿ. ದಾಟಲಾರದೇ ಬಂದು ಅಪ್ಪನ ಜೊತೆಗೂಡಿದ. “ಉಳುವವನಿಗೇ ಭೂಮಿ” ಎಂಬ ಕಾನೂನು ಬಂದು ಹೊಸಗಾಳಿ ಬೀಸುತ್ತಿತ್ತು. ಉಳಿದ ರೈತರು ಬದಲಾದರೂ ನಿಂಗಪ್ಪ ನಂಬಿಕಸ್ತನಾಗಿದ್ದ. ಮಾದೇಶನ ಉಪದೇಶ ಫಲಿಸಲಿಲ್ಲ. ವಾಸು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿ ವಹಿಸದೇ ಹೊಲಗದ್ದೆಗಳಲ್ಲೇ ಬೆಳೆದ. ಕಷ್ಟಪಟ್ಟು ಹತ್ತನೇ ತರಗತಿ ಮುಗಿಸಿ ಭೂತಾಯಿಯ ಸೇವೆಗೆ ನಿಂತ. ಕೃಷ್ಣನೂ ತೆವಳುತ್ತ ಹತ್ತನೇ ತರಗತಿ ಪೂರೈಸಿದ. ಕಮಲಾ, ವಿಮಲಾ ಕೂಡ ಅಷ್ಟೇ. ಮುಂದೆ ಹೋಗಲಿಲ್ಲ. ತಾಯಿಯೊಡನಿದ್ದು ಅಡಿಗೆ, ಹಾಡು, ಹಸೆ ಕಲಿತರು. ಇದ್ದುದರಲ್ಲಿ ವಿಠ್ಠಲನೇ ಜಾಣ. ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜು ಸೇರಿದ. ವಾಸಣ್ಣ ಹೊಲಗದ್ದೆಗಳಲ್ಲಿ ದುಡಿಯುತ್ತ... ಉಸ್ತುವಾರಿ ಮಾಡುತ್ತ ಶ್ರೀಪತಿರಾಯರ ಹೊಣೆ ಹೊತ್ತಿದ್ದ. ರಾಶಿಯ ಸಮಯದಲ್ಲಂತೂ ತೋಟದ ಮನೆಯಲ್ಲೇ ನಿಂಗಪ್ಪನೊಂದಿಗೆ ಇದ್ದು ಸರ್ಪದಂತೆ ಕಾವಲು ಕಾಯುತ್ತಿದ್ದ. ಮಾದೇಶ ಎಷ್ಟೇ ಹಾರಾಡಿದರೂ ವಾಸಣ್ಣನನ್ನು ಕಂಡರೆ ಇಲಿಯಾಗುತ್ತಿದ್ದ. ಕಾಳುಕಡಿಗಳನ್ನೆಲ್ಲ ಚೀಲದಲ್ಲಿ ತುಂಬಿಸಿ ಉಗ್ರಾಣ ಸೇರಿಸುವವರೆಗೂ ಅವನಿಗೆ ನಿದ್ದೆ ದೂರವೇ. ಆದರೆ, ಶ್ರೀಪತಿರಾಯರನ್ನೊಳಗೊಂಡು ಇಡೀ ಮನೆ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿತ್ತು. ವಾಸಣ್ಣನಿಂದಾಗಿ...

ಕೃಷ್ಣನಿಗೆ ಅಜ್ಜಿ, ತಾತನ ಮುದ್ದು ಹೆಚ್ಚಾಗಿತ್ತು. ವಿದ್ಯೆ ನೈವೇದ್ಯವೇ... ಅಪ್ಪನೊಡನೆ ಕುಳಿತರೂ